

‘ಶಾಲೆಗೆ ಈ ದಿನ ರಜಾ!’
ಮೊದಲಬಾರಿ ಸಮುದ್ರ ನೋಡಿದಾಗ ಖುಷಿಯಿಂದ ಜಿಗಿದಾಡಿದ ನೆನಪು ನಿಮಗೂ ಇದೆಯಲ್ಲವೇ? ನಮ್ಮ ಆ ಒಂದು ಕ್ಷಣದ ಖುಷಿಯನ್ನು ಅನುದಿನವೂ ಸಮುದ್ರದ ಅಲೆಯೊಟ್ಟಿಗೆ ಕಳೆಯುವ ಈ ಪೆಂಗ್ವಿನ್‌ಗಳು ಹೇಗೆ ಅನುಭವಿಸುತ್ತಿವೆ ನೋಡಿ. ಪೆಂಗ್ವಿನ್‌ಗಳ ಈ ಮೋಜಿನ ಗಳಿಗೆಯನ್ನು ಸೆರೆಹಿಡಿದಿರುವುದು ಸ್ವೀಡನ್‌ನ ಟಾಮ್ ಸ್ವೆನ್‌ಸೋನ್



ಒಂದ್ ಹೆಜ್ಜೆ ಮುಂದಿಟ್ರೆ ಹುಷಾರ್! ತನ್ನ ಎತ್ತಿಕೊಂಡು ಹೋಗಲು ಬಂದ ಬಾಲ್ಡ್ ಈಗಲ್ ಅನ್ನು ಹೆದರಿಸಿ ತಪ್ಪಿಸಿಕೊಳ್ಳಲು ಯತ್ನಿಸುತ್ತಿರುವ ಪ್ರೇರಿ ಡಾಗ್! ಸಾವಿಗೆ ಸೆಡ್ಡು ಹೊಡೆಯುವುದು ಎಂದರೆ ಇದೇ ಇರಬೇಕು. ಈ ಅಮೋಘ ಮುಖಾಮುಖಿಯನ್ನು ಸೆರೆಹಿಡಿದಿರುವುದು ಅಮೆರಿಕದ ಆರ್ಥರ್ ಟ್ರೆವಿನೊ



‘ಒಂದ್ ಕಥೆ ಹೇಳ್ಲಾ?’ ರಕ್ಕಸ ತಿನ್ನಲು ಬಂದಾಗ ಎಂದೆಂದೂ ಮುಗಿಯದ ಕಥೆ ಹೇಳಿ ಜೀವ ಉಳಿಸಿಕೊಳ್ಳುವ ಉಪಾಯ ಗೊತ್ತಲ್ಲ... ಅದು ಬರೀ ನಮ್ಮ ಜಾನಪದ ಕಥೆಗಳಲ್ಲಿ ಮಾತ್ರವಲ್ಲ, ವನ್ಯಜಗತ್ತಿನಲ್ಲಿಯೂ ಉಪಯೋಗಕ್ಕೆ ಬರುವಂತೆ ತೋರುತ್ತದೆ. ಇನ್ನೊಂದು ಕ್ಷಣದಲ್ಲಿ ತನ್ನನ್ನು ನುಂಗುವ ಅಮೆಜಾನ್ ಕಿಂಗ್‌ಫಿಷರ್ ಅನ್ನು ಮೀನು ನಿಬ್ಬೆರಗಾಗಿ ದಿಟ್ಟಿಸುತ್ತಿರುವ ಈ ಚಿತ್ರ ಸ್ಪೇನ್‌ನ ಕ್ಷೇಮಾ ಗಾರ್ಸಿಯಾ ಲೆಸೆಕಾಗೆ ಕ್ಯಾಮೆರಾಕ್ಕೆ ಸೆರೆ ಸಿಕ್ಕಿದ್ದು ಬ್ರೆಜಿಲ್‌ನಲ್ಲಿ.

ನಗೆಯ ಬುಗ್ಗೆಯನ್ನು ಚಿಮ್ಮಿಸಬಲ್ಲ ಪ್ರಾಣಿಗಳು, ಈ ಆಟದ ಮೂಲಕ ಏನು ಹೇಳುತ್ತಿರಬಹುದು? ‘ಹಲೋ, ಎಕ್ಸ್‌ಕ್ಯೂಸ್ ಮೀ... ಈ ಜಗತ್ತಲ್ಲಿ ನೀವಷ್ಟೇ ಅಲ್ಲ, ನಾವೂ ಇದ್ದೇವೆ... ಈ ಭೂಮಿಯ ಎಲ್ಲ ಸಂಪನ್ಮೂಲಗಳ ಮೇಲೆ ನಮಗೂ ಅಧಿಕಾರ ಇದೆ. ನಿಮ್ಮ ನಾಗರಿಕತೆಯ ನಾಗಾಲೋಟಕ್ಕೆ ಲಗಾಮು ಹಾಕಿ... ನಮ್ಮಷ್ಟಕ್ಕೆ ನಮ್ಮನ್ನು ಬದುಕಲು ಬಿಡಿ’ ಎಂದು ಹೇಳುತ್ತಿರಬಹುದೇ?

ಏಳು ವರ್ಷಗಳ ಹಿಂದೆ ತಮ್ಮದೇ ಫೋಟೊಗ್ಯಾಲರಿಯನ್ನು ನೋಡುತ್ತಿದ್ದ ವನ್ಯಜೀವಿ ಛಾಯಾಗ್ರಾಹಕ ಪೌಲ್ ಜಾಯ್ಸನ್ ಹಿಕ್ಸ್‌ಗೆ ಹೀಗೆಯೇ ಅನಿಸಿತ್ತು. ಕ್ಯಾಮೆರಾಗೆ ತನ್ನ ಹಿಂಬದಿಯನ್ನು ತೋರಿಸಿ ಅಣಕಿಸುತ್ತಿದ್ದ ಹದ್ದಿನ ಚಿತ್ರ ನೋಡಿ ಅವರೇ ಬಿದ್ದುಬಿದ್ದೂ ನಕ್ಕಿದ್ದರು. ಆದರೆ ಹಾಗೆ ನಗುವುಕ್ಕಿದ ಮರುಕ್ಷಣವೇ ಅವರ ಹುಬ್ಬು ಗಂಟಿಕ್ಕಿತ್ತು. ಈ ಚಿತ್ರ ತನಗೆ ಏನು ಹೇಳುತ್ತಿದೆ ಎಂದು ಕೇಳಿಕೊಂಡರು. ಹೇಗಾದರೂ ಈ ಮನುಷ್ಯಪ್ರಾಣಿಯ ಗಮನಸೆಳೆದು, ತಮಗೂ ಬದುಕಲು ಬಿಡಿ ಎಂದು ಕೇಳಿಕೊಳ್ಳುವ ಉದ್ದೇಶ ಅದಕ್ಕಿರಬಹುದೇ ಅನಿಸಿತು. ವನ್ಯಜೀವಿಗಳ ಜಾಗೃತಿ ಮೂಡಿಸಲು ಇದೊಂದು ಪರಿಣಾಮಕಾರಿ ದಾರಿಯಾಗಬಹುದಲ್ಲವೇ ಎಂದೂ ಅನಿಸಿತು. ಆ ಕ್ಷಣಗದಲ್ಲಿಯೇ‘ಕಾಮಿಡಿ ವೈಲ್ಡ್‌ಲೈಫ್ ಫೋಟೊಗ್ರಫಿ ಅವಾರ್ಡ್’ ಪರಿಕಲ್ಪನೆ ಹುಟ್ಟಿಕೊಂಡಿದ್ದು. ಈ ಆಲೋಚನೆಯನ್ನು ತಮ್ಮ ಸ್ನೇಹಿತ, ವನ್ಯಜೀವಿ ಛಾಯಾಗ್ರಾಹಕ ಟಾಮ್ ಸಲೀಮ್ ಅವರ ಬಳಿ ಹಂಚಿಕೊಂಡರು. ಅವರೂ ಈ ಆಲೋಚನೆಯನ್ನು ಮೆಚ್ಚಿ ಜೊತೆಯಾದರು. ಇವರಿಬ್ಬರ ಪ್ರಯತ್ನಕ್ಕೆ ತುಸು ತಡವಾಗಿ ಸೇರಿ ಈಗ ಅದರ ಅವಿಭಾಜ್ಯ ಅಂಗವೇ ಆಗಿರುವವರು ಮೈಖೆಲೆ ವುಡ್.

ಕಳೆದ ಏಳು ವರ್ಷಗಳಿಂದ ಈ ಮೂವರೂ ಸೇರಿಕೊಂಡು ಸ್ಪರ್ಧೆ ನಡೆಸಿ, ‘ಕಾಮಿಡಿ ವೈಲ್ಡ್‌ಲೈಫ್ ಫೋಟೊಗ್ರಫಿ ಅವಾರ್ಡ್’ ಕೊಡುತ್ತ ಬಂದಿದ್ದಾರೆ. ವರ್ಷದಿಂದ ವರ್ಷಕ್ಕೆ ಜನಪ್ರಿಯವಾಗುತ್ತಿರುವ ಈ ಸ್ಪರ್ಧೆಯಲ್ಲಿ ಜಗತ್ತಿನಾದ್ಯಂತ ಸಾವಿರಾರು ವನ್ಯಜೀವಿ ಛಾಯಾಗ್ರಾಹಕರು ಭಾಗವಹಿಸುತ್ತಾರೆ. ಈ ವರ್ಷ ಸ್ಪರ್ಧೆಯ ಅಂಕಣದಲ್ಲಿರುವ ಕೆಲವು ಚಿತ್ರಗಳನ್ನು ನೀವೂ ನೋಡಿ, ನಕ್ಕು ಹಗುರಾಗಿ.

ಪ್ರತಿಕ್ರಿಯಿಸಿ: feedback@sudha.co.in